ಅಧ್ಯಕ್ಷರು.—ಪಾಯಿಂಟ್ ಆಫ್ ಆರ್ಡರ್‌ಗೆ ನಾನು ಅವಕಾಶ ಕೊಡುವುದಿಲ್ಲ. ಕುಳಿತುಕೊಳ್ಳಿ.

ಶ್ರೀ ಎಂ.ಎಸ್. ಕೃಷ್ಣನ್.—ಪಾಯಿಂಟ್ ಆಫ್ ಆರ್ಡರ್‌ಗೆ ಅವಕಾಶ ಕೊಡುವುದಿಲ್ಲ ಎಂಬುದನ್ನು ನೀವು ಹೇಗೆ ಡಿಸೈಡ್ ಮಾಡುತ್ತೀರಿ. ಅದನ್ನು ಡಿಸೈಡ್ ಮಾಡುವುದಕ್ಕೆ ನಿಮಗೆ ಅಧಿಕಾರ ಇಲ್ಲ.

ಅಧ್ಯಕ್ಷರು.—ಪಾಯಿಂಟ್ ಆಫ್ ಆರ್ಡರ್‌ಗೆ ನಾನು ಅವಕಾಶ ಕೊಡುವುದಿಲ್ಲ.

ಶ್ರೀ ಎಂ.ಎಸ್. ಕೃಷ್ಣನ್.—ಸ್ವಾಮಿ ಮಂತ್ರಿಗಳು ಇಷ್ಟಬಂದಾಗ ಏದ್ದು ಹೋಗಬಹುದೇ? ಉತ್ತರ ಕೊಡುವವರು ಯಾರು?

ಶ್ರೀ. ಬಿ.ಎಸ್. ಯಡಿಯೂರಪ್ಪ.—ಬೇರೆ ಏನೋ ಹೇಳುತ್ತೇನೆ ಎಂದು ಹೇಳುತ್ತಿದ್ದಾರೆ, ಅವಕಾಶ ಕೊಡಿ ಸ್ವಾಮಿ.

ಅಧ್ಯಕ್ಷರು.—ಮಧ್ಯಾಹ್ನ ನಿಮ್ಮ ವಿಷಯ ಬರುತ್ತದೆ, ಆಗ ಮಾತನಾಡಿ ಈಗ ಕುಳಿತುಕೊಳ್ಳಿ. ಈಗನಾನು ಅವಕಾಶ ಕೊಡುವುದಿಲ್ಲ. ನಾನು ಈಗ ಎಂ.ಎಲ್. ಉಸ್ತಾದ್‌ರವರನ್ನು ಕರೆದಿರುತ್ತೇನೆ, ಅವರು ಪ್ರಶ್ನೆ ಕೇಳಬಹುದು.

ಬಿಜಾಪುರ ನಗರಕ್ಕೆ ಕುಡಿಯುವ ನೀರಿನ ಸರಬರಾಜು ಬಗ್ಗೆ

೫೨ (೩೭೯) ಶ್ರೀ ಎಂ.ಎಲ್. ಉಸ್ತಾದ್ (ಬಿಜಾಪುರ).—ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಬಿಜಾಪುರ ನಗರಕ್ಕೆ ಕುಡಿಯುವ ನೀರಿನ ವ್ಯವಸ್ಥೆಗಾಗಿ ಅಂದಾಜು ಮತ್ತು ನಕ್ಷೆಗಳನ್ನು ತಯಾರು ಮಾಡಿರುವುದು ನಿಜವಲ್ಲವೇ ?

ಆ) ಕೋಲಾರ್ ಬ್ಯಾರೇಜಿನಿಂದ ಬಿಜಾಪುರ ನಗರಕ್ಕೆ ನೀರು ಸರಬರಾಜು ಮಾಡುವ ಸಲುವಾಗಿ ಇನ್ನೊಂದು ಕೊಳವೆ ಮಾರ್ಗ ಹಾಕಲು ಅಂದಾಜು ಮತ್ತು ನಕ್ಷೆಯನ್ನು ತಯಾರಿಸಿರುವುದು ನಿಜವಲ್ಲವೇ ?

ಇ) ಮೇಲೆ ಹೇಳಿರುವ ಎರಡು ಕೆಲಸಗಳು ಯಾವ ಹಂತದಲ್ಲಿದೆ ?

ಈ) ಈ ಬಗ್ಗೆ ಸರ್ಕಾರವು ಕೈಗೊಂಡ ಕ್ರಮಗಳೇನು ?

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಸಚಿವರು).—

ಅ) ನಿಜ

ಆ) ನಿಜ

ಇ) ಪಟ್ಟಣದ ನೀರು ಸರಬರಾಜು ವ್ಯವಸ್ಥೆ ಅಭಿವೃದ್ಧಿಗೊಳಿಸಲು ಸಿದ್ಧಗೊಳಿಸಲಾದ ಅಂದಾಜು ಯೋಜನೆಗೆ ಆಡಳಿತಾತ್ಮಕ ಅನುಮೋದನೆ ನೀಡಲು ಪರಿಶೀಲಿಸಲಾಗುತ್ತಿದೆ.

ಕೋಲಾರ ಬ್ಯಾರೇಜ್‌ನಿಂದ ಬಿಜಾಪುರ ನಗರಕ್ಕೆ ನೀರು ಸರಬರಾಜು ಮಾಡುವ ಸಲುವಾಗಿ ಕೊಳವೆ ಮಾರ್ಗವನ್ನು ಹಾಕುವ ಕೆಲಸವನ್ನು ಪ್ರಾರಂಭಿಸಲಾಗಿದೆ. ಪೈಪ್‌ಲೈನ್ ಹಾಕುವ ಸಲುವಾಗಿ ೭೪೦೦ ಮೀಟರ್‌ಗಳ ಪೈಕಿ ೨೫೦೦ ಮೀಟರ್‌ಗಳ ಉದ್ದವನ್ನು ಅಗೆಯಲಾಗಿದೆ ಮತ್ತು ೧೭೦೦ ಮೀಟರ್ ಉದ್ದದ ಕೊಳವೆಗಳ ಜೋಡಣೆ ಕೆಲಸ ಮುಗಿದಿದೆ ಮತ್ತು ಉಳಿದ ಪೈಪ್‌ಲೈನ್ ಕೆಲಸ ಪ್ರಗತಿಯಲ್ಲಿದೆ. ಪಂಪ್‌ಸೆಟ್‌ನ್ನು ಕೂಡಿಸುವ ಸಲುವಾಗಿ ಜಾಕ್‌ವೆಲ್ ಮೇಲೆ ಗರ್ಡರ್ ಹಾಕುವ ಕೆಲಸ ಮುಗಿದಿದ್ದು ಜಾಕ್‌ವೆಲ್ ಮೇಲೆ ಪಂಪ್ ಹೌಸ್ ಕಟ್ಟುವ ಕೆಲಸ ಪ್ರಾರಂಭಿಸಬೇಕಾಗಿದೆ. ಪಂಪಿಂಗ್ ಮೆಷನರಿಗಳಿಗಾಗಿ ಗುತ್ತಿಗೆದಾರರನ್ನು ನೇಮಿಸಲು ಕ್ರಮ ತೆಗೆದುಕೊಂಡಿದೆ.

ಈ) ನೀರು ಸರಬರಾಜು ವ್ಯವಸ್ಥೆಯ ಅಭಿವೃದ್ಧಿ ಯೋಜನೆಗೆ ಸಂಬಂಧಿಸಿದ ಅಂದಾಜು ಪಟ್ಟಿಗೆ ಸರ್ಕಾರದಿಂದ ಆಡಳಿತಾತ್ಮಕ ಅನುಮೋದನೆ ನೀಡಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಕೋಲಾರ ಬ್ಯಾರೇಜಿನಿಂದ ಪೈಪ್‌ಲೈನ್ ಹಾಕುವ ಬಗ್ಗೆ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಲಿಗೆ ಸೂಚನೆ ನೀಡಿ ನೀರಾವರಿ ಇಲಾಖೆ ಹಾಗೂ ಬಿಜಾಪುರ ನಗರ ಸಭೆಯವರಿಂದ ಠೇವಣಿ ಹಣವನ್ನು ಪಡೆದು ಕೆಲಸವನ್ನು ಕೂಡಲೇ ಪ್ರಾರಂಭಿಸುವಂತೆ ಆದೇಶ ನೀಡಿದ್ದು ಅದರಂತೆ ಮಂಡಲಿಯು ಕೆಲಸವನ್ನು ಕೈಗೆತ್ತಿಕೊಂಡಿದೆ.

ಶ್ರೀ ಎಂ.ಎಲ್. ಉಸ್ತಾದ್.—ಸನ್ಮಾನ್ಯ ಅಧ್ಯಕ್ಷರೇ, ಈಗ ಸಭ್ಯರಿಗೆ ಮಾನ್ಯ ಸಚಿವರು ಏನು ಉತ್ತರ ಕೊಟ್ಟರು ಅದು ಮಾರ್ಚ್ ತಿಂಗಳಲ್ಲಿ ೧.೯೧ ಕೋಟಿ ರೂಪಾಯಿಗಳ ಯೋಜನೆ ಏನಿದೆ ಅದಕ್ಕೆ ಕ್ಯಾಬಿನೆಟ್ ಅಪ್ರೂವಲ್ ಕೊಟ್ಟರುವ ಬಗ್ಗೆ ಆಯಿತು. ಅದು ಆಗಿದೆ, ಕೆಲಸ ನಡೆದಿದೆ. ಮೊದಲು ಬಳೂತಿಯಿಂದ ವಾಟರ್ ಲಿಫ್ಟ್ ಮಾಡುತ್ತಿದ್ದರು. ಆಮೇಲೆ ಅದರ ಹೆಡ್ ವರ್ಕ್ಸ್ ಚೇಂಜ್ ಮಾಡಿ ಕೋಲಾರದಿಂದ ಮಾಡುವುದಕ್ಕೆ ಹಚ್ಚಿದ್ದಾರೆ. ಎರಡನೆಯದು ನಾನು ಕೇಳಿದ ಪ್ರಶ್ನೆ, ವಿಜಾಪುರ ಕುಡಿಯುವ ನೀರಿನ ಯೋಜನೆ ಬಗ್ಗೆ ಪ್ಲಾನ್ ಅಂಡ್ ಎಸ್ಟಿಮೇಟ್ಸ್ ಯಾವ ದಾದರೂ ಪೆಂಡಿಂಗ್ ಇದೆಯೇ ಎಂಬುದು. ಇನ್ನೊಂದು ಕೋಲಾರ ಬ್ಯಾರೇಜ್‌ನಿಂದ ಇನ್ನೊಂದು ಅಡಿಷನಲ್ ಪೈಪ್‌ಲೈನ್ ಹಾಕುವುದರ ಬಗ್ಗೆ ಒಂದು ಪ್ಲಾನ್ ಪೆಂಡಿಂಗ್ ಇದೆಯೇ ಎಂಬುದು. ಮಾನ್ಯ ಸಚಿವರು ಇದಕ್ಕೆ ತಪ್ಪು ಉತ್ತರ ಕೊಟ್ಟಿದ್ದಾರೆ. ಇದರ ಬಗ್ಗೆ ನಾನು ಹೇಳುತ್ತೇನೆ, ವಿಜಾಪುರ ಕುಡಿಯುವ ನೀರಿನ ಯೋಜನೆ ಬಗ್ಗೆ ಒಂದು ಪ್ಲಾನ್ ಅಂಡ್ ಎಸ್ಟಿಮೇಟ್ ಪೆಂಡಿಂಗ್ ಇದೆ. ೧೯೮೧ನೇ ಇಸವಿಯಲ್ಲಿ ೨೬ ಲಕ್ಷ ರೂಪಾಯಿಗಳ ಯೋಜನೆ ಆಗಿದ್ದು, ಇದು ಪೆಂಡಿಂಗ್ ಇದ್ದು, ಈಗ ರಿವೈಸ್ಡ್ ಎಸ್ಟಿಮೇಟ್ ಪ್ರಕಾರ ೧.೩೫ ಲಕ್ಷ ರೂಪಾಯಿಗಳು ಆಗಿದೆ. ಅದು ಹೆಚ್.ಯು.ಡಿ ಯಿಂದ ಫೈನಾನ್ಸ್ ಡಿಪಾರ್ಟ್‌ಮೆಂಟ್‌ಗೆ ಹೋಗಿ, ಪುನಃ ಹೆಚ್.ಯು.ಡಿ.ಗೆ ಬಂದಿದೆ. ಅದರ ಬಗ್ಗೆ ಕ್ಯಾಬಿನೆಟ್ ಅಪ್ರೂವಲ್ ಕೊಡಬೇಕಾಗಿದೆ, ಅದನ್ನು ಕೊಟ್ಟಿದ್ದೀರಾ? ಎರಡನೆಯದಾಗಿ, ಕೋಲಾರದಿಂದ ವಿಜಾಪುರಕ್ಕೆ ಒಂದು ಅಡಿಷನಲ್ ಪೈಪ್‌ಲೈನ್ ಹಾಕುವುದಕ್ಕೆ ಹತ್ತುಕೋಟಿ ರೂಪಾಯಿಗಳ ಒಂದು ಪ್ಲಾನ್ ಗೌರ್ನಮೆಂಟ್‌ನಲ್ಲಿ ಪೆಂಡಿಂಗ್ ಇದೆ. ಇದರ ಬಗ್ಗೆ ಅಪ್ರೂವಲ್ ಕೊಟ್ಟಿದ್ದೀರಾ? ಈ ಎರಡೂ ಪ್ಲಾನ್‌ಅಂಡ್ ಎಸ್ಟಿಮೇಟ್ ಬಗ್ಗೆ ನಾವು ಏನು ಉತ್ತರ ಹೇಳುತ್ತೀರಿ ಹೇಳಿರಿ.

ಶ್ರೀ ಎಂ. ಚಂದ್ರಶೇಖರ್.—ಮಾನ್ಯ ಅಧ್ಯಕ್ಷರೇ, ಬಳೂತಿ ಹೆಡ್‌ವರ್ಕ್ಸ್‌ನಿಂದ ಕೋಲಾರಕ್ಕೆ ಬದಲಾವಣೆ ಮಾಡಿ ಅಲ್ಲಿಂದ ನೀರನ್ನು ಕೊಳವೆಯ ಮುಖಾಂತರ ವಿಜಾಪುರ ನಗರಕ್ಕೆ ತೆಗೆದುಕೊಳ್ಳುವುದಕ್ಕೆ ಒಂದು ಎಸ್ಟಿಮೇಟ್ ಇದೆ. ೧೯೧.೪೬ ಲಕ್ಷ ರೂಪಾಯಿಗಳ ಅಂದಾಜಿನ ಒಂದು ಎಸ್ಟಿಮೇಟ್ ಇದ್ದು ಇದರ ಬಗ್ಗೆ ಸರಕಾರದ ಆಡಳಿತಾತ್ಮಕ ಮಂಜೂರಾತಿ ಸಿಕ್ಕಿದೆ. ಸಭ್ಯರಲ್ಲಿ ಈ ಬಳೂತಿ ಹೆಡ್‌ವರ್ಕ್ಸ್ ಬ್ಯಾರೇಜ್‌ನಿಂದ ವಿಜಾಪುರ ನಗರಕ್ಕೆ ನೀರು ಹೋಗುತ್ತಿದ್ದು, ಅದನ್ನು ಬದಲಾವಣೆ ಮಾಡಿ ಕೋಲಾರ ಬ್ಯಾರೇಜ್‌ನಿಂದ ಪೈಪ್‌ಲೈನ್ ಹಾಕಿ ವಿಜಾಪುರಕ್ಕೆ ನೀರು ತೆಗೆದು ಕೊಂಡು ಹೋಗುವುದಕ್ಕೆ ವ್ಯವಸ್ಥೆ ಆಗುತ್ತಿದೆ. ಈ ಒಂದು ಎಸ್ಟಿಮೇಟ್ ಚಾರ್ಜ್‌ಆಫ್ ಆಗಿ ಕೆಲಸ ಕಾರ್ಯಗಳು ಪ್ರಗತಿಯಲ್ಲಿ ಇವೆ. ನಾನು ಹೇಳಿದ್ದು ಪ್ರಗತಿಯಲ್ಲಿರುವ ಕೆಲಸ ಕಾರ್ಯಗಳನ್ನು ಲೇಟೆಸ್ಟ್ ಇನ್‌ಫರ್ಮೇಷನ್ ಪ್ರಕಾರ, ೩೫೦೦ ಮೀಟರ್ ಮಣ್ಣು ಕೆಲಸ ಆಗಿದ್ದು, ಕೊಳವೆ ಕೆಲಸ ೨೪೦೦ ಮೀಟರ್ ಆಗಿದೆ, ಅಂದರೆ ೨೪೦೦ ಮೀಟರ್ ಪೈಪ್ ಲೈನ್‌ಗಳನ್ನು ಈಗಾಗಲೇ ಇಳಿಸಿದ್ದಾರೆ. ಇನ್ನು ಮಿಕ್ಕ ೭ ೪೦೦ ಮೀಟರ್ ಪೈಪ್ ಇಳಿಸುವ ಕೆಲಸವನ್ನು ಪೂರೈಸಿದಾಗ ಕೆಲಸ ಪೂರ್ಣ ಆಗುತ್ತದೆ. ಕೋಲಾರ್ ಬ್ಯಾರೇಜ್‌ನಿಂದ ಡೀವಿಯೇಷನ್ ಪೈಪ್‌ಲೈನ್ ಏನಿದೆ ಆ ಕೆಲಸವೂ ಆಗುತ್ತದೆ. ವಿತರಣೆ ಕೆಲಸ ಕನ್‌ಸ್ಟ್ರಕ್ಷನ್ ಕೆಲಸದ ಅಂದಾಜು ಪಟ್ಟಿಯಲ್ಲಿ ಬಂದಿರುವುದರಿಂದ ಹಂತ ಹಂತವಾಗಿ ತೆಗೆದು ಕೊಳ್ಳುತ್ತೇವೆ.

ಶ್ರೀ ಎಂ.ಎಲ್. ಉಸ್ತಾದ್.—ಮಾನ್ಯ ಅಧ್ಯಕ್ಷರೇ, ನಾನು ಕೇಳಿರುವುದೇ ಒಂದು ಇವರು ಹೇಳುತ್ತಿರುವುದೇ ಇನ್ನೊಂದು. ೧.೯೧ ಕೋಟಿ ರೂಪಾಯಿಗಳ ಒಂದು ಯೋಜನೆಯನ್ನು ಈಗಾಗಲೇ ಕ್ಯಾಬಿನೆಟ್ ಅಪ್ರೂವ್ ಮಾಡಿದೆ ಹಾಗೂ ಕೆಲಸ ನಡೆಯುತ್ತಿದೆ. ನಾನು ಕೇಳುತ್ತಿರುವುದೇನೆಂದರೆ, ೧೯೮೧-೮೨ರಲ್ಲಿ ಪುನಃ ೧.೩೫ ಕೋಟಿ ರೂಪಾಯಿಗಳ ಒಂದು ಎಸ್ಟಿಮೇಟ್ ಅಪ್ರೂವ್ ಆಗದೆ ಪೆಂಡಿಂಗ್ ಇದೆ. ಅದನ್ನು ಸರ್ಕಾರ ಯಾವಾಗ ಅಪ್ರೂವ್ ಮಾಡುತ್ತದೆಂದು ಹೇಳಬೇಕು. ರಿಸರ್ವಾಯರ್ ಕೆಲಸದ ಎಸ್ಟಿಮೇಟ್ ಪೆಂಡಿಂಗ್ ಇದೆ, ಇನ್ನು ಎರಡನೆಯದು ಎಂದರೆ, one pipeline is already there from Baluti to Bijapur. Now the head works are shifted from Baluti to Kolar. I am asking whether a separate additional pipeline plan and estimate is pending before the Government, the cost of that is Rs. 10 crores. Whether you are going to give approval to that?

ಶ್ರೀ ಎಂ. ಚಂದ್ರಶೇಖರ್.—ಮೊದಲನೆಯದಾಗಿ ಹೇಳುವುದಾದರೆ ೧.೩೫ ಕೋಟಿ ರೂಪಾಯಿಗಳ ಎಸ್ಟಿಮೇಟ್ ಏನಾಗಿದೆ ಎಂದರೆ, ಹೆಡ್ ವರ್ಕ್ಸ್ ಕೆಲಸವು ಬಳೂತಿಯಿಂದ ಕೋಲಾರ್ ಬ್ಯಾರೇಜ್‌ಗೆ ವರ್ಗಾವಣೆ ಮಾಡಿರುವುದರ ಪ್ರಯುಕ್ತ.....

ಶ್ರೀ ಎಂ.ಎಲ್ ಉಸ್ತಾದ್.—ನಾನು ಕೇಳಿರುವುದೇ ಬೇರೆ ನೀವು ಹೇಳುತ್ತಿರುವುದೇ ಬೇರೆ.

ಶ್ರೀ ಎಂ. ಚಂದ್ರಶೇಖರ್.—ಇದಲ್ಲದೆ ಒಟ್ಟಿಯೊಳಗೆ ರಿಸರ್ವಾಯರ್‌ಗೆ ಸಂಬಂಧಪಟ್ಟಂತೆ ಪೈಪ್ ಲೈನ್‌ಗಳನ್ನು ಹಾಕುವುದಕ್ಕೆ ೪ ಕೋಟಿ ರೂಪಾಯಿಗಳ ಒಂದು ಎಸ್ಟಿಮೇಟ್ ಆಗಿದೆ. ಈ ೪ ಕೋಟಿ ರೂಪಾಯಿಗಳ ಎಸ್ಟಿಮೇಟಿಗೆ ಇನ್ನೂ ಸರ್ಕಾರ ಮಂಜೂರಾತಿ ಕೊಟ್ಟಿಲ್ಲ. ಆಲಮಟ್ಟಿ ಡ್ಯಾಂ ಕನ್‌ಸ್ಟ್ರಕ್ಷನ್ ಆಗುತ್ತಿದ್ದ ಹಾಗೆ ಎಲ್ಲಾ ಕೆಲಸವನ್ನು ಮಾಡಲಾಗುತ್ತದೆ. ಪೈಪ್‌ಲೈನ್ ಕೆಲಸವನ್ನು ಮುಂಗಿಸಿ ಬಿಜಾಪುರಕ್ಕೆ ನೀರು ಒದಗಿಸುತ್ತೇವೆ. ನೀರಿನ ವಿತರಣೆ ಮಾಡುವುದಕ್ಕೆ ಮಾಡಬೇಕಾದ ಕೆಲಸಗಳಿಗೂ ಎಸ್ಟಿಮೇಟ್ ಆಗಿದೆ. ಬೇಸಿಗೆಯಲ್ಲಿ ಬಿಜಾಪುರ ಜಿಲ್ಲೆಗೆ ನೀರು ಸಿಗುತ್ತಿರಲಿಲ್ಲ. ಆದಕ್ಕೋಸ್ಕರವಾಗಿ ಕೊಲಾರ್ ಬ್ಯಾರೇಜ್‌ನಿಂದ ನೀರು ಒದಗಿಸುವುದಕ್ಕೆ ಕೆಲಸವನ್ನು ಮಾಡಿಸುತ್ತಿದ್ದೇವೆ.

ಶ್ರೀ ಎಂ. ಎಲ್. ಉಸ್ತಾದ್.—ಮಾನ್ಯ ಸಚಿವರು ಬಿಜಾಪುರಕ್ಕೆ ಬಂದಿದ್ದಾಗ ನಾನು ಮತ್ತು ಅನೇಕ ಜನರು ಕೂಡಿ ಸಚಿವರಿಗೆ ರೆಪ್ರೆಸೆಂಟೇಷನ್ ಕೊಟ್ಟು ಕುಡಿಯುವ ನೀರಿನ ಸಮಸ್ಯೆಯನ್ನು ಬಗೆ ಹರಿಸಬೇಕೆಂದು ವಿವರಿಸಿ ಕೇಳಿಕೊಂಡಿದ್ದೇವೆ. ಆದರೆ, ಈಗ ಅವರು ಹೇಳುತ್ತಿರುವುದೇ ಬೇರೆಯಾಗಿದೆ. ಹೋದ ಸಾರಿ ಅಧಿವೆ ಶನ ನಡೆಯುವಾಗ ಸರ್ಕಾರ ಕುಡಿಯುವ ನೀರನ್ನು ಬಿಜಾಪುರಕ್ಕೆ ಒದಗಿಸುವಲ್ಲಿ ವಿಫಲವಾಗಿದೆಯೆಂದು ಸದನದಲ್ಲಿ ಲಬ-ಲಬೋ ಮಾಡಿದ್ದೆ (ಮಾನ್ಯ ಉಸ್ತಾದ್‌ದವರು ಹೋದ ಸೆಷನ್‌ನಲ್ಲಿ ಬಿಜಾಪುರದಲ್ಲಿ ನೀರಿನ ಕ್ಷಾಮ ಉಂಟಾಗಿದೆಯೆಂದು ಸದನದ ಬಾಯಿಯನ್ನು ಬಡಿದು ಕೊಂಡಿದ್ದನ್ನು ಲಬ-ಲಬೋ ಎನ್ನುವ ಮೂಲಕ ತಿಳಿಸಿದರು) ಆದು ತಮಗೂ ಗೊತ್ತಿದೆ. ಬಿಜಾಪುರದ ಜನರು ಕುಡಿಯುವ ನೀರಿಗಾಗಿ ಬಹಳ ಕಷ್ಟಪಡುತ್ತಿದ್ದಾರೆ. ನಾನು ಕೇಳುತ್ತಿರುವ ಪ್ರಶ್ನೆ ಮಾನ್ಯ ಸಚಿವರಿಗೆ ಅರ್ಥವಾಗುತ್ತಿಲ್ಲವಾದ್ದರಿಂದ ಅಧಿಕಾರಿಗಳು ಕೊಟ್ಟಿರುವ ತಪ್ಪು ಮಾಹಿತಿಯನ್ನು ಹೇಳುತ್ತಿದ್ದಾರೆ. ಅಡಿಷನಲ್ ಪ್ಲಾನ್‌ನಂತೆ ೧೩೫ ಕೋಟಿ ರೂಪಾಯಿಗಳನ್ನು ಸರ್ಕಾರ ಮಂಜೂರು ಮಾಡಿದೆಯೇ ಎಂದರೆ ಅವರಿಗೆ ಹೇಳುವುದಕ್ಕೆ ತಿಳಿಯುತ್ತಿಲ್ಲ. ಅದುದರಿಂದ, ನಾನು ತಮ್ಮ ಮುಖೇನ ಕೇಳುವುದೇನೆಂದರೆ, ಕನ್‌ಸರ್ವ್ ಆಫೀಸರ್ ಮತ್ತು ಬಿಜಾಪುರ ಮುನಿಸಿಪಲ್ ಪ್ರೆಸಿಡೆಂಟ್ ಹಾಗೂ ಕಮಿಷನರ್, ಶಾಸಕರುಗಳನ್ನೊಂಡ ಮೀಟಿಂಗ್‌ನ್ನು ಯಾವಾಗ ಕರೆಯುತ್ತಾರೆಂಬುದನ್ನು ಸಚಿವರು ಹೇಳಬೇಕು. ಆ ಮೀಟಿಂಗ್‌ನಲ್ಲಿ ನಾನು ಎಲ್ಲಾ ವಿಷಯವನ್ನು ಅವರಿಗೆ ತಿಳಿಯುವಂತೆ ಹೇಳುತ್ತೇನೆ.

ಶ್ರೀ ಎಂ. ಚಂದ್ರಶೇಖರ್.—ಮಾನ್ಯ ಅಧ್ಯಕ್ಷರೇ, ೧೯೮೧-೮೨ರಲ್ಲಿ ವಾಟರ್ ಸಪ್ಲೈಗಾಗಿ ತಯಾರು ಮಾಡಿರುವ ೧೩೫ ಕೋಟಿ ರೂಪಾಯಿಗಳ ಎಸ್ಟಿಮೇಟ್‌ಗೆ ಸರ್ಕಾರದ ಮಂಜೂರಾತಿ ಸಿಕ್ಕಿಲ್ಲ. ಅದಕ್ಕೂ ಮೊದಲು ಹೆಡ್ ವರ್ಕ್ಸ್ ಮತ್ತು ವಾಟರ್ ಡಿಸ್ಟ್ರಿಬ್ಯೂಷನ್‌ಗಳ ಎರಡೂ ಪ್ಲಾನ್‌ಗಳಿಗೆ (೧೯೮೧ ಕೋಟಿ ರೂಪಾಯಿಗಳಿಗೆ) ಆಡಳಿತ್ಮಕ ಮಂಜೂರಾತಿ ಸಿಕ್ಕಿದೆ. ಮುಂದೆ ಬೇಸಿಗೆಯಲ್ಲಿ ನೆಗರದ ಜನರಿಗೆ ನೀರಿನ ತೊಂದರೆ ಆಗಬಾರದು ಎಂದು ೩೧ ಲಕ್ಷ ರೂಪಾಯಿಗಳ ಕಾಮಗಾರಿಯನ್ನು ಆಂದರೆ ಕೊಲಾರ್ ಬ್ಯಾರೇಜ್‌ನಿಂದ ಬಲೂತಿಗೆ ಏನು ಪೈಪ್‌ಲೈನ್ ಹೋಗುತ್ತಿತ್ತು, ಅದನ್ನು ಹಾಗೆಯೇ ಉಳಿಸಿಕೊಂಡು ಹೆಡ್‌ವರ್ಕ್ಸ್, ತೆಗೆದುಕೊಂಡು ಕನೆಕ್ಷನ್ ಕೊಡುವುದು, ಈಗ ಇರತಕ್ಕಂಥ ವಿತರಣೆಯನ್ನು ಮುಂದುವರಿಸಿಕೊಂಡು ಹೋಗುವುದು ಎಂದು ತೀರ್ಮಾನಿಸಿ ಸಿ. ಎಂ. ಸಿ. ವಿಜಾಪುರ ದವರಿಗೆ ತಮ್ಮ ಕಾಂಟ್ರಿಬ್ಯೂಷನ್ ಕೊಡುವಂತೆ ಕೇಳಿಕೊಂಡಿದ್ದೇವೆ. ಅವರು ಅದನ್ನು ಒಪ್ಪಿಕೊಂಡು ಕೊಟ್ಟಲ್ಲಿ ಮಾಡಬಹುದು.

ಶ್ರೀ ಎಂ. ಎಲ್. ಉಸ್ತಾದ್.—ಈ ಕೆಲಸವನ್ನು ಯಾವ ತಿಂಗಳು ಮತ್ತು ತಾರೀಖು ಮುಗಿಸುತ್ತೀರಿ ಎಂಬುದನ್ನು ಹೇಳಿ.

ಶ್ರೀ ಎಂ. ಚಂದ್ರಶೇಖರ್.—ಅಲ್ಲಿ ನಡೆದಿರುವ ಕಾಮಗಾರಿಗಳ ಬಗ್ಗೆ ವಿವರಗಳನ್ನು ಅಧಿಕಾರಿಗಳಿಂದ ೧೫ ದಿವಸಗಳಿಗೊಮ್ಮೆ ಕೇಳಿ ತರಿಸಿಕೊಳ್ಳುತ್ತಾ ಇದ್ದೇನೆ. ಆ ರೀತಿಯಲ್ಲಿ ಅಧಿಕಾರಿಗಳಿಗೆ ಸೂಚನೆ ಕೊಟ್ಟಿದ್ದೇನೆ. ೧೫ ದಿವಸದ ಕೆಲಸದ ಬಗ್ಗೆ ತಮಗೆ ಹೇಳಿದ್ದೇನೆ. ೨೨೪೦ ವಿಟರ್ ಪೈಪ್‌ಲೈನ್ ಹಾಕಿದ್ದಾರೆ. ಮತ್ತು ಈಗಲೂ ನಡೆಯುತ್ತಿರುವ ಕೆಲಸದ ಬಗ್ಗೆ ವಿವರಗಳು ಪ್ರತಿ ೧೫ ದಿನಗಳಿಗೊಮ್ಮೆ ಬರುತ್ತಾ ಇದೆ. ಆದಷ್ಟು ಜಾಗ್ರತೆ ಕೆಲಸವನ್ನು ಮುಗಿಸುತ್ತೇವೆ.

ಶ್ರೀ ಎಂ. ಎಲ್. ಉಸ್ತಾದ್.—ಮೀಟಿಂಗ್ ಯಾವಾಗ ಕರೆಯುತ್ತೀರಿ ?

ಶ್ರೀ ಎಂ. ಚಂದ್ರಶೇಖರ್.—ನಾವುಗಳು ಈ ೧೫ ದಿವಸಗಳಲ್ಲಿ ಒಂದು ದಿವಸ ಇಲ್ಲಿ ಕುಳಿತು ಮಾತನಾಡೋಣ.

ಅಧ್ಯಕ್ಷರು.—ಮಾನ್ಯ ಮಣಿಯವರು ತಮ್ಮ ಪ್ರಶ್ನೆ ಕೇಳಿರಿ.